ಸೂ. 22	58. ಅಲ್ ಮುಜಾದಲಃ	ರು. 3

آیاتها ٢٢ — سُوْرَةُ الْمُجَادَلَةِ مَدَنِيَّةٌ — رکوعاتها ٣

58. ಅಲ್ ಮುಜಾದಲಃ

(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِیْمِ

1. *ನಿಮ್ಮೊಡನೆ ತನ್ನ ಪತಿಯ ವಿಷಯದಲ್ಲಿ ವಾದಿಸುತ್ತಿರುವ ಹಾಗೂ ಅಲ್ಲಾಹನೊಡನೆ ಮೊರೆಯಿಡುತ್ತಲಿರುವ ಸ್ತ್ರೀಯ ಮಾತನ್ನು ಅಲ್ಲಾಹನು ಆಲಿಸಿದನು.[1] ಅಲ್ಲಾಹನು ನಿಮ್ಮಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದಾನೆ. ಅವನು ಎಲ್ಲವನ್ನೂ ಕೇಳುವವನು ಮತ್ತು ನೋಡುವವನಾಗಿದ್ದಾನೆ.

قَدْ سَمِعَ اللّٰهُ قَوْلَ الَّتِیْ تُجَادِلُكَ فِیْ
زَوْجِهَا وَ تَشْتَكِیْۤ اِلَى اللّٰهِ ۖۗ وَاللّٰهُ یَسْمَعُ
تَحَاوُرَكُمَا ؕ اِنَّ اللّٰهَ سَمِیْعٌۢ بَصِیْرٌ ﴿١﴾

2. ನಿಮ್ಮ ಪೈಕಿ ತಮ್ಮ ಪತ್ನಿಯರನ್ನು 'ಝಿಹಾರ್' ಮಾಡುವವರ[2] ಪತ್ನಿಯರು ಅವರ ತಾಯಂದಿರಲ್ಲ. ಅವರನ್ನು ಹೆತ್ತವರೇ ಅವರ ತಾಯಂದಿರು. ಇವರು ಅತ್ಯಂತ ಅಪ್ರಿಯ ಹಾಗೂ ಸುಳ್ಳಾದ ಒಂದು ಮಾತನ್ನು ಹೇಳುತ್ತಾರೆ. ವಾಸ್ತವದಲ್ಲಿ ಅಲ್ಲಾಹನು ಬಹಳ ಮನ್ನಿಸುವವನೂ ಮಹಾಕ್ಷಮಾಶೀಲನೂ ಆಗಿರುತ್ತಾನೆ.[3]

اَلَّذِیْنَ یُظٰهِرُوْنَ مِنْكُمْ مِّنْ نِّسَآىِٕهِمْ
مَّا هُنَّ اُمَّهٰتِهِمْ ؕ اِنْ اُمَّهٰتُهُمْ اِلَّا الّٰٓـِٔیْ
وَلَدْنَهُمْ ؕ وَ اِنَّهُمْ لَیَقُوْلُوْنَ مُنْكَرًا
مِّنَ الْقَوْلِ وَ زُوْرًا ؕ وَ اِنَّ اللّٰهَ
لَعَفُوٌّ غَفُوْرٌ ﴿٢﴾

***ಇಲ್ಲಿಂದ 28ನೆಯ ಕಾಂಡ ಆರಂಭ.**

1. 'ಖೌಲ ಬಿನ್ತಿ ಸಅಲಬ' ಎಂಬ ಮಹಿಳೆಯ ಕುರಿತು ಈ ವಾಣಿ ಅವತೀರ್ಣಗೊಂಡಿತ್ತು. ಅವರೊಂದಿಗೆ ಅವರ ಪತಿ 'ಝಿಹಾರ್' ಮಾಡಿದ್ದರು. ಆದ್ದರಿಂದ ಈ ಬಗ್ಗೆ ಇಸ್ಲಾಮಿನ ವಿಧಿಯೇನು ಎಂದು ಕೇಳಲು ಅವರು ಪ್ರವಾದಿವರ್ಯರ(ಸ) ಬಳಿಗೆ ಬಂದಿದ್ದರು. ಆ ತನಕ ಈ ವಿಷಯದ ಕುರಿತು ಅಲ್ಲಾಹನ ಆಜ್ಞೆ ಬಂದಿರಲಿಲ್ಲ. ಆದ್ದರಿಂದ ಪ್ರವಾದಿವರ್ಯರು(ಸ) 'ನೀವು ನಿಮ್ಮ ಪತಿಯ ಪಾಲಿಗೆ ನಿಷಿದ್ಧರಾಗಿದ್ದೀರಿ ಎಂಬುದು ನನ್ನ ಅನಿಸಿಕೆ' ಎಂದು ಹೇಳಿದರು. ಆಗ ಆಕೆ 'ನನ್ನ ಮತ್ತು ನನ್ನ ಮಕ್ಕಳ ಜೀವನ ನಾಶವಾಗುವುದು' ಎಂದು ಮೊರೆಯಿಡತೊಡಗಿದಳು. ನನ್ನ ಮನೆ ಹಾಳಾಗದಿರಲು ಯಾವುದಾದರೊಂದು ಉಪಾಯವನ್ನು ತಿಳಿಸಿ ಎಂದು ಆಕೆ ಪ್ರವಾದಿವರ್ಯರೊಂದಿಗೆ(ಸ) ಗೋಗರೆಯುತ್ತಿದ್ದಂತೆಯೇ ಅಲ್ಲಾಹನ ವತಿಯಿಂದ ವಹ್ಯ್(ದಿವ್ಯವಾಣಿ) ಅವತೀರ್ಣಗೊಂಡಿತು ಮತ್ತು ಈ ಸಮಸ್ಯೆಗೆ ಸಂಬಂಧಿಸಿದ ವಿಧಿಯನ್ನು ತಿಳಿಸಲಾಯಿತು.
2. ಅರಬರಲ್ಲಿ ಹಲವೊಮ್ಮೆ ಇಂತಹ ಪರಿಸ್ಥಿತಿ ತಲೆದೋರುತ್ತಿತ್ತು. ಪತಿ-ಪತ್ನಿಯರಲ್ಲಿ ಜಗಳವಾದರೆ ಪತಿ ಸಿಟ್ಟಿನಿಂದ, "ನೀನು ನನ್ನ ಪಾಲಿಗೆ ತಾಯಿಯ ಬೆನ್ನಿನಂತೆ" ಎಂದು ಹೇಳಿ ಬಿಡುತ್ತಿದ್ದ. ಇದರ ತಾತ್ಪರ್ಯ "ನಿನ್ನೊಡನೆ ಸಂಸರ್ಗ ನಡೆಸುವುದು, ನನ್ನ ಪಾಲಿಗೆ ತಾಯಿಯೊಂದಿಗೆ ಸಂಸರ್ಗ ನಡೆಸಿದಂತೆ" ಎಂದಾಗಿತ್ತು. ಆಧುನಿಕ ಕಾಲದಲ್ಲೂ ಅನೇಕ ಅಜ್ಞಾನಿಗಳು ಪತ್ನಿಯೊಂದಿಗೆ ಜಗಳಾಡಿ ಆಕೆಯನ್ನು ತಾಯಿಗೆ ಅಥವಾ ಸಹೋದರಿಗೆ ಹೋಲಿಸಿ ಬಿಡುತ್ತಾರೆ. ಅರ್ಥಾತ್, ಆ ವ್ಯಕ್ತಿ ಮುಂದೆ ಆಕೆಯನ್ನು ಪತ್ನಿಯೆಂದು ಪರಿಗಣಿಸುವುದಿಲ್ಲ ಬದಲಾಗಿ ಅವನ ಪಾಲಿಗೆ ನಿಷಿದ್ಧರಾದ ಮಹಿಳೆಯರಿಗೆ ಸಮಾನ ಎಂದು ಭಾವಿಸುತ್ತಾನೆ. 'ಝಿಹಾರ್' ಎಂದರೆ ಇದುವೇ ಆಗಿದೆ. ಅಜ್ಞಾನ ಕಾಲದಲ್ಲಿ ಅರಬರ ಪಾಲಿಗೆ ಇದು ತಲಾಕ್ ಅಥವಾ ಅದಕ್ಕಿಂತ ಉಗ್ರವಾದ ವಿಚ್ಛೇದನದ ಪ್ರಕಟಣೆಯಾಗಿತ್ತು.
3. ಅರ್ಥಾತ್- ಇದು ವ್ಯಕ್ತಿಗೆ ತೀವ್ರ ತರವಾದ ಶಿಕ್ಷೆ ದೊರೆಯಬೇಕಾದಂತಹ ಕರ್ಮವಾಗಿದೆ. ಆದರೆ ಅಲ್ಲಾಹನು ತನ್ನ ಔದಾರ್ಯದ

وَالَّذِيْنَ يُظٰهِرُوْنَ مِنْ نِّسَآئِهِمْ ثُمَّ
يَعُوْدُوْنَ لِمَا قَالُوْا فَتَحْرِيْرُ رَقَبَةٍ
مِّنْ قَبْلِ اَنْ يَّتَمَآسَّا ۗ ذٰلِكُمْ تُوْعَظُوْنَ
بِهٖ ۗ وَاللّٰهُ بِمَا تَعْمَلُوْنَ خَبِيْرٌ ﴿٣﴾

3. ತಮ್ಮ ಪತ್ನಿಯರನ್ನು 'ಝಿಹಾರ್' ಮಾಡಿದವರು ಅನಂತರ ತಾವು ಹೇಳಿದ ಮಾತಿನಿಂದ ಮರಳಿದರೆ[4] ಅವರು ಪರಸ್ಪರರನ್ನು ಸ್ಪರ್ಶಿಸುವುದಕ್ಕೆ ಮುಂಚೆ ಒಬ್ಬ ಗುಲಾಮನನ್ನು ವಿಮೋಚಿಸ ಬೇಕಾಗುವುದು. ಹೀಗೆ ನಿಮಗೆ ಉಪದೇಶ ನೀಡಲಾಗುತ್ತದೆ ಮತ್ತು ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಅರಿತಿರುವನು.[5]

فَمَنْ لَّمْ يَجِدْ فَصِيَامُ شَهْرَيْنِ
مُتَتَابِعَيْنِ مِنْ قَبْلِ اَنْ يَّتَمَآسَّا ۚ
فَمَنْ لَّمْ يَسْتَطِعْ فَاِطْعَامُ سِتِّيْنَ
مِسْكِيْنًا ۗ ذٰلِكَ لِتُؤْمِنُوْا بِاللّٰهِ وَ
رَسُوْلِهٖ ۗ وَتِلْكَ حُدُوْدُ اللّٰهِ ۗ وَ
لِلْكٰفِرِيْنَ عَذَابٌ اَلِيْمٌ ﴿٤﴾

4. ಯಾರಿಗಾದರೂ ಗುಲಾಮನು ಸಿಗದಿದ್ದರೆ- ಅವರಿಬ್ಬರು ಪರಸ್ಪರ ರನ್ನು ಸ್ಪರ್ಶಿಸುವುದಕ್ಕೆ ಮುಂಚೆ[6] - ಅವನು ನಿರಂತರವಾಗಿ ಎರಡು ತಿಂಗಳ ಉಪವಾಸ ವ್ರತವನ್ನು ಆಚರಿಸಬೇಕು. ಇದಕ್ಕೂ ಅಶಕ್ತನಾಗಿರುವವನು ಅರುವತ್ತು ಮಂದಿ ದರಿದ್ರರಿಗೆ ಊಟ ಕೊಡಬೇಕು.[7] ನೀವು ಅಲ್ಲಾಹ್ ಮತ್ತು ಅವನ ರಸೂಲರ ಮೇಲೆ ವಿಶ್ವಾಸವಿರಿಸುವಂತಾಗಲಿಕ್ಕಾಗಿ ಈ ಆಜ್ಞೆಯನ್ನು ನೀಡಲಾಗು ತ್ತಿದೆ.[8] ಇವು ಅಲ್ಲಾಹನಿಂದ ನಿಶ್ಚಯಿಸಲ್ಪಟ್ಟಿರುವ ಮೇರೆಗಳು ಮತ್ತು ಸತ್ಯನಿಷೇಧಿಗಳಿಗೆ ವೇದನಾಯುಕ್ತ ಯಾತನೆಯಿದೆ.

اِنَّ الَّذِيْنَ يُحَآدُّوْنَ اللّٰهَ وَرَسُوْلَهٗ
كُبِتُوْا كَمَا كُبِتَ الَّذِيْنَ مِنْ قَبْلِهِمْ
وَقَدْ اَنْزَلْنَآ اٰيٰتٍۢ بَيِّنٰتٍ ۗ وَ لِلْكٰفِرِيْنَ
عَذَابٌ مُّهِيْنٌ ﴿٥﴾

5. ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ವಿರೋಧಿಸುವವರು ತಮಗಿಂತ ಹಿಂದಿನವರು ಅಪಮಾನಿತರಾದಂತೆಯೇ ಅಪಮಾನಿತ ರಾಗುವರು. ನಾವು ಸುಸ್ಪಷ್ಟ ಸೂಕ್ತಗಳನ್ನು ಅವತೀರ್ಣಗೊಳಿಸಿ ದ್ದೇವೆ ಮತ್ತು ಸತ್ಯನಿಷೇಧಿಗಳಿಗೆ ಅಪಮಾನಕರ ಯಾತನೆ ಇದೆ.

يَوْمَ يَبْعَثُهُمُ اللّٰهُ جَمِيْعًا فَيُنَبِّئُهُمْ
بِمَا عَمِلُوْا ۗ اَحْصٰىهُ اللّٰهُ وَنَسُوْهُ ۗ

6. ಅಲ್ಲಾಹನು ಇವರೆಲ್ಲರನ್ನೂ ಪುನಃ ಜೀವಂತಗೊಳಿಸಿ ಎಬ್ಬಿಸುವ ಮತ್ತು ಅವರು ಏನೆಲ್ಲ ಮಾಡಿ ಬಂದಿರುವರೆಂಬುದನ್ನು ಅವರಿಗೆ ತಿಳಿಸುವ ದಿನ (ಈ ಅಪಮಾನಕರ ಯಾತನೆ ಒದಗಲಿದೆ.)

ಮೂಲಕ ಮೊದಲನೆಯದಾಗಿ 'ಝಿಹಾರ್'ನ ಕುರಿತಾದ ಅಜ್ಞಾನ ಕಾಲದ ನಿಯಮವನ್ನು ರದ್ದುಪಡಿಸಿ ನಿಮ್ಮ ಕುಟುಂಬ ಜೀವನವನ್ನು ವಿನಾಶದಿಂದ ರಕ್ಷಿಸಿದನು. ಎರಡನೆಯದಾಗಿ ಈ ಕೃತ್ಯವನ್ನೆಸಗಿದವರಿಗೆ ಅಪರಾಧಕ್ಕೆ ನೀಡಬಹುದಾದ ಅತ್ಯಂತ ಹಗುರವಾದ ಶಿಕ್ಷೆಯನ್ನು ಗೊತ್ತು ಪಡಿಸಿದನು.

4. ಇದಕ್ಕೆ ಎರಡು ವಿವರಣೆಗಳಿರಲು ಸಾಧ್ಯವಿದೆ. ಮೊದಲನೆಯದಾಗಿ ಅವರು ಹೇಳಿದ ಮಾತನ್ನು ರದ್ದು ಪಡಿಸಬಯಸಿದರೆ ಎರಡನೆಯದಾಗಿ ಆ ಮಾತಿನ ಮೂಲಕ ಅವರು ತಮ್ಮ ಪಾಲಿಗೆ ನಿಷಿದ್ಧಗೊಳಿಸಿಕೊಂಡಿದ್ದನ್ನು ಧರ್ಮಸಮ್ಮತಗೊಳಿಸಬಯಸಿದರೆ.

5. ಅರ್ಥಾತ್- ವ್ಯಕ್ತಿ ಯಾರಿಗೂ ತಿಳಿಯದಂತೆ ಮನೆಯಲ್ಲಿ ಪತ್ನಿಯೊಂದಿಗೆ 'ಝಿಹಾರ್' ಮಾಡಿ ಅನಂತರ 'ಪ್ರಾಯಶ್ಚಿತ್ತ' ಮಾಡದೆ ಪತಿ-ಪತ್ನಿಯರ ನಡುವೆ ಪೂರ್ವದ ರೀತಿಯ ದಾಂಪತ್ಯ ಸಂಬಂಧವನ್ನು ಮುಂದುವರಿಸಿದರೆ ಲೋಕದಲ್ಲಿ ಆ ವಿಷಯ ಯಾರಿಗೂ ತಿಳಿಯದಿರಬಹುದು. ಆದರೆ ಅಲ್ಲಾಹನಿಗಂತೂ ಅದು ತಿಳಿದಿರುವುದು. ಅಲ್ಲಾಹನ ವಿಚಾರಣೆಯಿಂದ ಅವರು ಯಾವ ರೀತಿಯಲ್ಲೂ ಪಾರಾಗಲಾರರು.

6. ಅರ್ಥಾತ್- ನಿರಂತರ ಎರಡು ತಿಂಗಳ ಉಪವಾಸ ಆಚರಿಸಬೇಕು. ನಡುವೆ ಒಂದು ಉಪವಾಸವೂ ಬಿಟ್ಟು ಹೋಗಬಾರದು.

7. ಅರ್ಥಾತ್- ಎರಡು ಹೊತ್ತಿನ ಪೂರ್ಣ ಭೋಜನ ನೀಡಬೇಕು. ಅದು ಬೇಯಿಸಿದ್ದಾಗಿದ್ದರೂ ಅಥವಾ ಆಹಾರ ಪದಾರ್ಥಗಳ ರೂಪದಲ್ಲಿದ್ದರೂ ಸರಿ. ಅರುವತ್ತು ಮಂದಿಗೆ ಒಂದೇ ದಿನ ಉಣಿಸಬಹುದು ಅಥವಾ ಒಬ್ಬ ವ್ಯಕ್ತಿಗೆ ಅರವತ್ತು ದಿನವೂ.

8. ಇಲ್ಲಿ ವಿಶ್ವಾಸವಿರಿಸುವುದೆಂದರೆ ಸತ್ಯಸಂಧ ಮತ್ತು ಪ್ರಾಮಾಣಿಕ ಸತ್ಯವಿಶ್ವಾಸಿಯಂತಹ ಧೋರಣೆ ಕೈಗೊಳ್ಳುವುದು.

ಅವರು ಮರೆತು ಬಿಟ್ಟಿದ್ದಾರೆ. ಆದರೆ ಅಲ್ಲಾಹನು ಅವರು ಮಾಡಿದುದೆಲ್ಲವನ್ನೂ ಎಣಿಸಿ ಕಾಯ್ದಿರಿಸಿದ್ದಾನೆ. ಅಲ್ಲಾಹನು ಪ್ರತಿಯೊಂದು ವಸ್ತುವಿನ ಬಗೆಗೂ ಸಾಕ್ಷಿಯಾಗಿದ್ದಾನೆ.

وَاللَّهُ عَلَىٰ كُلِّ شَيْءٍ شَهِيدٌ ۝٦ ع

7. ಭೂಮಿ-ಆಕಾಶಗಳ[9] ಪ್ರತಿಯೊಂದು ವಸ್ತುವಿನ ಜ್ಞಾನವು ಅಲ್ಲಾಹನಿಗೆ ಇದೆ ಎಂಬುದು ನಿಮಗೆ ತಿಳಿದಿಲ್ಲವೇ? ಮೂರು ಮಂದಿಯ ನಡುವೆ ರಹಸ್ಯ ಮಾತುಕತೆ ನಡೆಯುತ್ತಿರುವಾಗ ಅವರೊಂದಿಗೆ ನಾಲ್ಕನೆಯವನಾಗಿ ಅಲ್ಲಾಹನು ಎಂದೂ ಇಲ್ಲದೆ ಇರುವುದಿಲ್ಲ ಅಥವಾ ಐವರೊಳಗೆ ರಹಸ್ಯ ಮಾತುಕತೆ ನಡೆಯುತ್ತಿರುವಾಗ ಆರನೆಯವನಾಗಿ ಅಲ್ಲಾಹನಿಲ್ಲದೆ ಇರುವುದಿಲ್ಲ. ರಹಸ್ಯ ಮಾತುಕತೆ ನಡೆಸುತ್ತಿರುವವರು ಇದಕ್ಕಿಂತ ಕಡಿಮೆ ಇರಲಿ ಅಥವಾ ಹೆಚ್ಚಿರಲಿ, ಅವರು ಎಲ್ಲೇ ಇರಲಿ, ಅಲ್ಲಾಹನು ಅವರ ಜೊತೆಗಿರುತ್ತಾನೆ ಮತ್ತು ಪುನರುತ್ಥಾನ ದಿನ ಅವನು ಅವರಿಗೆ, ಅವರು ಏನೆಲ್ಲ ಮಾಡಿದ್ದರೆಂಬುದನ್ನು ತಿಳಿಸುವನು. ಅಲ್ಲಾಹನು ಸಕಲ ವಸ್ತುಗಳ ಜ್ಞಾನವುಳ್ಳವನು.

أَلَمْ تَرَ أَنَّ اللَّهَ يَعْلَمُ مَا فِي السَّمَاوَاتِ
وَمَا فِي الْأَرْضِ ۖ مَا يَكُونُ مِن نَّجْوَىٰ
ثَلَاثَةٍ إِلَّا هُوَ رَابِعُهُمْ وَلَا خَمْسَةٍ إِلَّا
هُوَ سَادِسُهُمْ وَلَا أَدْنَىٰ مِن ذَٰلِكَ وَلَا
أَكْثَرَ إِلَّا هُوَ مَعَهُمْ أَيْنَ مَا كَانُوا ۖ
ثُمَّ يُنَبِّئُهُم بِمَا عَمِلُوا يَوْمَ الْقِيَامَةِ ۚ
إِنَّ اللَّهَ بِكُلِّ شَيْءٍ عَلِيمٌ ۝٧

8. ಗುಪ್ತ ಸಮಾಲೋಚನೆಗಳಿಂದ ತಡೆಯಲಾಗಿದ್ದರೂ ತಮಗೆ ಪ್ರತಿಬಂಧಿಸಲಾಗಿರುವ ಆ ಕೃತ್ಯವನ್ನೇ ಮಾಡುತ್ತಿರುವ ಜನರನ್ನು ನೀವು ನೋಡಲಿಲ್ಲವೇ? ಇವರು ಗುಪ್ತವಾಗಿ ಪರಸ್ಪರರೊಡನೆ, ಪಾಪ, ಅತಿರೇಕ ಹಾಗೂ ಸಂದೇಶವಾಹಕರ ಆಜ್ಞೋಲ್ಲಂಘನೆಯ ಮಾತುಗಳನ್ನಾಡುತ್ತಾರೆ ಮತ್ತು ಇವರು ನಿಮ್ಮ ಬಳಿಗೆ ಬಂದಾಗ ಅಲ್ಲಾಹನು ನಿಮಗೆ ಸಲಾಮ್ ಮಾಡಿರದ ರೀತಿಯಲ್ಲಿ ನಿಮಗೆ ಸಲಾಮ್ ಮಾಡುತ್ತಾರೆ[10] ಮತ್ತು ನಮ್ಮ ಈ ಮಾತುಗಳಿಗಾಗಿ ಅಲ್ಲಾಹನು ನಮಗೆ ಶಿಕ್ಷೆ ನೀಡುವುದಿಲ್ಲವೇಕೆ ಎಂದು ತಮ್ಮ ಮನಸ್ಸಿನೊಳಗೆ ಹೇಳಿಕೊಳ್ಳುತ್ತಾರೆ. ಅವರಿಗೆ ನರಕವೇ ಸಾಕು. ಅವರು ಅದಕ್ಕೇ ಇಂಧನವಾಗುವರು. ಅವರ ಗತಿಯು ತೀರಾ ಕೆಟ್ಟದ್ದಾಗಿರುವುದು.

أَلَمْ تَرَ إِلَى الَّذِينَ نُهُوا عَنِ النَّجْوَىٰ
ثُمَّ يَعُودُونَ لِمَا نُهُوا عَنْهُ وَيَتَنَاجَوْنَ
بِالْإِثْمِ وَالْعُدْوَانِ وَمَعْصِيَتِ الرَّسُولِ
وَإِذَا جَاءُوكَ حَيَّوْكَ بِمَا لَمْ يُحَيِّكَ
بِهِ اللَّهُ وَيَقُولُونَ فِي أَنفُسِهِمْ لَوْلَا
يُعَذِّبُنَا اللَّهُ بِمَا نَقُولُ ۚ حَسْبُهُمْ جَهَنَّمُ
يَصْلَوْنَهَا ۖ فَبِئْسَ الْمَصِيرُ ۝٨

9. ಇಲ್ಲಿಂದ 10ನೆಯ ಸೂಕ್ತದ ತನಕ ಮುಸ್ಲಿಮ್ ಸಮಾಜದಲ್ಲಿದ್ದ ಕಪಟವಿಶ್ವಾಸಿಗಳು ಅನುಸರಿಸಿದ್ದ ಧೋರಣೆಯನ್ನು ತರಾಟೆಗೆ ತೆಗೆದುಕೊಳ್ಳಲಾಗಿದೆ. ಮೇಲ್ನೋಟಕ್ಕೆ ಅವರು ಸತ್ಯವಿಶ್ವಾಸಿಗಳ ಜತೆ ಸೇರಿಕೊಂಡಿದ್ದರು. ಆದರೆ ಒಳಗೊಳಗೇ ತಮ್ಮದೇ ಆದ ಪ್ರತ್ಯೇಕ ಕೂಟವೊಂದನ್ನು ರಚಿಸಿದ್ದರು. ಮುಸ್ಲಿಮರು ನೋಡುವಾಗಲೆಲ್ಲಾ ಅವರು ಪರಸ್ಪರ ಕುಳಿತು ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ಈ ಗುಪ್ತ ಸಮಾಲೋಚನೆಗಳ ಮೂಲಕ ಅವರು ಮುಸ್ಲಿಮರೊಳಗೆ ಒಡಕು ಉಂಟು ಮಾಡಲು, ಕ್ಷೋಭೆ ಹರಡಲು ಮತ್ತು ಭಯ ಹುಟ್ಟಿಸಲು ತರತರದ ಯೋಜನೆಗಳನ್ನು ಹೂಡುತ್ತಿದ್ದರು. ಹೊಸ ಹೊಸ ವದಂತಿಗಳನ್ನು ಹುಟ್ಟು ಹಾಕುತ್ತಿದ್ದರು.

10. ಇದು ಯಹೂದಿಯರ ಮತ್ತು ಕಪಟವಿಶ್ವಾಸಿಗಳ ಸಮಾನ ಧೋರಣೆಯಾಗಿತ್ತು. ಅನೇಕ ವರದಿಗಳಲ್ಲಿ ಬಂದಿರುವ ಪ್ರಕಾರ ಕೆಲವು ಯಹೂದಿಯರು ಪ್ರವಾದಿವರ್ಯರ(ಸ) ಬಳಿ ಹಾಜರಾಗಿ 'ಅಸ್ಸಾಮು ಅಲೈಕ ಯಾ ಅಬಲ್ ಕಾಸಿಮ್' ಎಂದರು. ಕೇಳುವವರು ಅವರು ಸಲಾಮ್ ಹೇಳಿದರೇನೋ ಎಂದು ಭಾವಿಸುವಂತೆ ಅವರು 'ಅಸ್ಸಾಮು ಅಲೈಕ'ವನ್ನು ಭಿನ್ನ ರೀತಿಯಲ್ಲಿ ಉಚ್ಚರಿಸಿದರು. ಆದರೆ ನಿಜವಾಗಿ ಅವರು 'ಸಾಮ್' ಎಂದು ಹೇಳಿದ್ದರು. ಅದರ ಅರ್ಥ 'ಮರಣ'ವೆಂದಾಗಿದೆ.

9. ಸತ್ಯವಿಶ್ವಾಸಿಗಳೇ, ನೀವು ಪರಸ್ಪರ ರಹಸ್ಯ ಮಾತುಗಳನ್ನಾಡುವಾಗ ಪಾಪ, ಅತಿರೇಕ ಮತ್ತು ಸಂದೇಶವಾಹಕರ ಆಜ್ಞೋಲ್ಲಂಘನೆಯ ಮಾತುಗಳನ್ನಾಡಬೇಡಿ, ಪುಣ್ಯದ ಹಾಗೂ ಧರ್ಮನಿಷ್ಠೆಯ ಮಾತು ಗಳನ್ನಾಡಿರಿ ಮತ್ತು ನಿಮ್ಮನ್ನು ಒಟ್ಟುಗೂಡಿಸಲ್ಪಡುವ ದಿನ ನೀವು ಯಾರ ಮುಂದೆ ಹಾಜರಾಗಲಿಕ್ಕಿದೆಯೋ ಆ ಅಲ್ಲಾಹನನ್ನು ಭಯಪಡಿರಿ.

يٰۤاَيُّهَا الَّذِيْنَ اٰمَنُوْۤا اِذَا تَنَاجَيْتُمْ فَلَا
تَتَنَاجَوْا بِالْاِثْمِ وَالْعُدْوَانِ وَمَعْصِيَتِ
الرَّسُوْلِ وَتَنَاجَوْا بِالْبِرِّ وَالتَّقْوٰى ؕ
وَاتَّقُوا اللّٰهَ الَّذِيْۤ اِلَيْهِ تُحْشَرُوْنَ ۝٩

10. ಗುಪ್ತ ಸಮಾಲೋಚನೆಯು ಪೈಶಾಚಿಕ ಕೃತ್ಯವಾಗಿದೆ. ಸತ್ಯ ವಿಶ್ವಾಸಿಗಳು ಅದರಿಂದ ಬೇಸರಗೊಳ್ಳಲೆಂದು ಹಾಗೆ ಮಾಡಲಾಗು ತ್ತದೆ. ಆದರೆ ಅಲ್ಲಾಹನ ಅನುಮತಿಯಿಲ್ಲದೆ ಅದು ಯಾವ ಹಾನಿಯನ್ನೂ ಮಾಡಲಾರದು. ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆ ಇಡಬೇಕು.

اِنَّمَا النَّجْوٰى مِنَ الشَّيْطٰنِ لِيَحْزُنَ الَّذِيْنَ
اٰمَنُوْا وَلَيْسَ بِضَآرِّهِمْ شَيْـًٔا اِلَّا بِاِذْنِ
اللّٰهِ ؕ وَعَلَى اللّٰهِ فَلْيَتَوَكَّلِ الْمُؤْمِنُوْنَ ۝١٠

11. ಸತ್ಯವಿಶ್ವಾಸಿಗಳೇ, ನಿಮ್ಮ ಸಭೆಗಳಲ್ಲಿ ಸ್ಥಳಾವಕಾಶ ಮಾಡಿಕೊಡಿ ರೆಂದು ನಿಮ್ಮೊಡನೆ ಹೇಳಿದಾಗ ಸ್ಥಳಾವಕಾಶ ಮಾಡಿಕೊಡಿರಿ. ಅಲ್ಲಾಹನು ನಿಮಗೆ ವಿಶಾಲತೆಯನ್ನು ದಯಪಾಲಿಸುವನು.[11] ನಿಮ್ಮೊಡನೆ ಎದ್ದುಬಿಡಿರಿ ಎಂದಾಗ ಎದ್ದು ಬಿಡಿರಿ.[12] ನಿಮ್ಮ ಪೈಕಿ ಸತ್ಯವಿಶ್ವಾಸವುಳ್ಳವರಿಗೆ ಮತ್ತು ಜ್ಞಾನವು ನೀಡಲ್ಪಟ್ಟಿರುವವರಿಗೆ ಅಲ್ಲಾಹನು ಉನ್ನತ ಪದವಿಗಳನ್ನು ದಯಪಾಲಿಸುವನು ಮತ್ತು ನೀವು ಮಾಡುತ್ತಿರುವುದೆಲ್ಲವೂ ಅಲ್ಲಾಹನಿಗೆ ತಿಳಿದಿದೆ.

يٰۤاَيُّهَا الَّذِيْنَ اٰمَنُوْۤا اِذَا قِيْلَ لَكُمْ
تَفَسَّحُوْا فِى الْمَجٰلِسِ فَافْسَحُوْا يَفْسَحِ
اللّٰهُ لَكُمْ ۚ وَاِذَا قِيْلَ انْشُزُوْا فَانْشُزُوْا
يَرْفَعِ اللّٰهُ الَّذِيْنَ اٰمَنُوْا مِنْكُمْ ۙ وَالَّذِيْنَ
اُوْتُوا الْعِلْمَ دَرَجٰتٍ ؕ وَاللّٰهُ بِمَا
تَعْمَلُوْنَ خَبِيْرٌ ۝١١

12. ಸತ್ಯವಿಶ್ವಾಸಿಗಳೇ, ನೀವು ಸಂದೇಶವಾಹಕರೊಡನೆ ಏಕಾಂತದಲ್ಲಿ ಮಾತಾಡುವಾಗ, ಮಾತಾಡುವುದಕ್ಕೆ ಮುಂಚೆ ದಾನಧರ್ಮ ಮಾಡಿರಿ.[13] ಇದು ನಿಮ್ಮ ಪಾಲಿಗೆ ಹೆಚ್ಚು ಉತ್ತಮವೂ ಪರಿಶು ದ್ಧವೂ ಆಗಿದೆ. ನಿಮ್ಮ ಬಳಿ ದಾನಧರ್ಮ ಮಾಡಲು ಏನೂ ಇಲ್ಲದಿದ್ದರೆ, ಅಲ್ಲಾಹನು ಮಹಾಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ.

يٰۤاَيُّهَا الَّذِيْنَ اٰمَنُوْۤا اِذَا نَاجَيْتُمُ
الرَّسُوْلَ فَقَدِّمُوْا بَيْنَ يَدَىْ نَجْوٰىكُمْ
صَدَقَةً ؕ ذٰلِكَ خَيْرٌ لَّكُمْ وَاَطْهَرُ ؕ
فَاِنْ لَّمْ تَجِدُوْا فَاِنَّ اللّٰهَ غَفُوْرٌ رَّحِيْمٌ ۝١٢

---

11. ಅಲ್ಲಾಹ್ ಮತ್ತು ಅವನ ಪ್ರವಾದಿ ಮುಸ್ಲಿಮರಿಗೆ ಕಲಿಸಿರುವ ಶಿಷ್ಟಾಚಾರಗಳಲ್ಲಿ ಇದೂ ಸೇರಿದೆ. ಮೊದಲೇ ಕೆಲವು ಮಂದಿ ಕುಳಿತುಕೊಂಡಿರುವ ಸಭೆಗೆ ನಂತರ ಇನ್ನಷ್ಟು ಜನರು ಬಂದರೆ ಹೊಸತಾಗಿ ಬರುವವರಿಗೆ ಸ್ಥಳಾವಕಾಶ ಮಾಡಿಕೊಡುವ ಮತ್ತು ಸಾಧ್ಯವಿರುವಷ್ಟು ಹತ್ತಿರವಾಗಿ ಜಾಗ ಮಾಡಿಕೊಡುವ ನಾಗರಿಕ ಪ್ರವೃತ್ತಿ ಕುಳಿತವರಲ್ಲಿ ಇರಬೇಕು. ಹಾಗೆಯೇ ನಂತರ ಬರುವವರಲ್ಲಿಯೂ ಬಲವಂತದಿಂದ ನುಗ್ಗದಿರುವ ಮತ್ತು ಯಾರನ್ನಾದರೂ ಎಬ್ಬಿಸಿ ಕೂರಲು ಪ್ರಯತ್ನಿಸದಿರುವಷ್ಟು ಸಭ್ಯತೆ ಇರಬೇಕು.

12. ಅರ್ಥಾತ್- ಸಭೆಯನ್ನು ವಿಸರ್ಜಿಸಲು ಹೇಳಿದಾಗ ಎದ್ದು ನಿಲ್ಲಬೇಕು. ಅಲ್ಲೇ ಸ್ಥಿರವಾಗಿ ಕುಳಿತಿರಬಾರದು.

13. ಹ. ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಪ್ರಕಾರ ಈ ಆಜ್ಞೆಗೆ ಕಾರಣವೇನೆಂದರೆ ಜನರು ಬಹಳ ಹೆಚ್ಚು ಮತ್ತು ಅನವಶ್ಯಕವಾಗಿ ಪ್ರವಾದಿವರ್ಯರನ್ನು(ಸ) ಏಕಾಂತದಲ್ಲಿ ಭೇಟಿಯಾಗ ಬಯಸುತ್ತಿದ್ದರು.

13. ಏಕಾಂತದಲ್ಲಿ ಮಾತುಕತೆ ನಡೆಸುವುದಕ್ಕೆ ಮುಂಚೆ ದಾನಧರ್ಮ ಮಾಡಬೇಕೆಂಬ ಬಗ್ಗೆ ನೀವು ಹೆದರಿಬಿಟ್ಟಿರಾ? ಸರಿ, ನೀವು ಹಾಗೆ ಮಾಡದಿದ್ದರೆ- ಅಲ್ಲಾಹನು ಅದರ ಬಗ್ಗೆ ನಿಮ್ಮನ್ನು ಕ್ಷಮಿಸಿ ಬಿಟ್ಟನು - ನಮಾಝನ್ನು ಸಂಸ್ಥಾಪಿಸಿರಿ, ಝಕಾತ್ ಕೊಡುತ್ತಲಿರಿ ಮತ್ತು ಅಲ್ಲಾಹ್ ಹಾಗೂ ಸಂದೇಶವಾಹಕರ ಅನುಸರಣೆ ಮಾಡುತ್ತಲಿರಿ. ನೀವು ಮಾಡುತ್ತಿರುವುದೆಲ್ಲವನ್ನೂ ಅಲ್ಲಾಹನು ಅರಿತಿರುತ್ತಾನೆ.[14]

ءَاَشْفَقْتُمْ اَنْ تُقَدِّمُوْا بَيْنَ يَدَیْ نَجْوٰىكُمْ صَدَقٰتٍ ۚ فَاِذْ لَمْ تَفْعَلُوْا وَتَابَ اللّٰهُ عَلَيْكُمْ فَاَقِيْمُوا الصَّلٰوةَ وَاٰتُوا الزَّكٰوةَ وَاَطِيْعُوا اللّٰهَ وَرَسُوْلَهٗ ۚ وَاللّٰهُ خَبِيْرٌۢ بِمَا تَعْمَلُوْنَ ﴿١٣﴾

14. ಅಲ್ಲಾಹನ ಕ್ರೋಧಕ್ಕೊಳಗಾಗಿರುವಂತಹ ಒಂದು ಕೂಟವನ್ನು ಮಿತ್ರರಾಗಿ ಮಾಡಿ ಕೊಂಡವರನ್ನು ಕಂಡಿರಾ? ಅವರು ನಿಮ್ಮವರೂ ಅಲ್ಲ, ಅವರ ಕಡೆಯವರೂ ಅಲ್ಲ. ಅವರು ತಿಳಿದೂ ತಿಳಿದೂ ಸುಳ್ಳು ಆಣೆ ಹಾಕುತ್ತಾರೆ.

اَلَمْ تَرَ اِلَى الَّذِيْنَ تَوَلَّوْا قَوْمًا غَضِبَ اللّٰهُ عَلَيْهِمْ ۗ مَا هُمْ مِّنْكُمْ وَلَا مِنْهُمْ ۙ وَيَحْلِفُوْنَ عَلَى الْكَذِبِ وَهُمْ يَعْلَمُوْنَ ﴿١٤﴾

15. ಅಲ್ಲಾಹನು ಅವರಿಗಾಗಿ ಕಠಿಣ ಯಾತನೆಯನ್ನು ಸಿದ್ಧಪಡಿಸಿಟ್ಟಿರುವನು. ಅವರು ಮಾಡುತ್ತಿರುವ ಕೃತ್ಯಗಳು ಅತ್ಯಂತ ಕೆಟ್ಟವು.

اَعَدَّ اللّٰهُ لَهُمْ عَذَابًا شَدِيْدًا ۗ اِنَّهُمْ سَآءَ مَا كَانُوْا يَعْمَلُوْنَ ﴿١٥﴾

16. ಅವರು ತಮ್ಮ ಆಣೆಗಳನ್ನು ಗುರಾಣಿಯಾಗಿ ಮಾಡಿಕೊಂಡಿದ್ದಾರೆ. ಅದರ ಮರೆಯಲ್ಲಿ ಅವರು ಜನರನ್ನು ಅಲ್ಲಾಹನ ಮಾರ್ಗದಿಂದ ತಡೆಯುತ್ತಾರೆ. ಇದಕ್ಕಾಗಿ ಅವರಿಗೆ ಅಪಮಾನಕರ ಯಾತನೆಯಿದೆ.

اِتَّخَذُوْٓا اَيْمَانَهُمْ جُنَّةً فَصَدُّوْا عَنْ سَبِيْلِ اللّٰهِ فَلَهُمْ عَذَابٌ مُّهِيْنٌ ﴿١٦﴾

17. ಅವರ ಸಂಪತ್ತಾಗಲಿ, ಸಂತಾನಗಳಾಗಲಿ ಅವರನ್ನು ಅಲ್ಲಾಹನಿಂದ ರಕ್ಷಿಸಲು ಕಿಂಚಿತ್ತೂ ಉಪಯುಕ್ತವಾಗಲಾರವು. ಅವರು ನರಕಾಗ್ನಿಯವರು. ಅವರು ಸದಾ ಅದರಲ್ಲೇ ಇರುವರು.

لَنْ تُغْنِیَ عَنْهُمْ اَمْوَالُهُمْ وَلَآ اَوْلَادُهُمْ مِّنَ اللّٰهِ شَيْـًٔا ۗ اُولٰٓئِكَ اَصْحٰبُ النَّارِ ۗ هُمْ فِيْهَا خٰلِدُوْنَ ﴿١٧﴾

18. ಅಲ್ಲಾಹನು ಅವರೆಲ್ಲರನ್ನೂ ಎಬ್ಬಿಸುವಂದು ಅವರು ನಿಮ್ಮ ಮುಂದೆ ಆಣೆ ಹಾಕಿದಂತೆಯೇ ಅವನ ಮುಂದೆಯೂ ಹಾಕುವರು ಮತ್ತು ಇದರಿಂದ ತಮ್ಮ ಕಾರ್ಯವೇನಾದರೂ ಸಾಧಿಸಲ್ಪಡುವುದೆಂದು ಅವರು ಭಾವಿಸುವರು. ಚೆನ್ನಾಗಿ ತಿಳಿದುಕೊಳ್ಳಿರಿ, ಅವರು ಅತ್ಯಂತ ನಿಕೃಷ್ಟ ಸುಳ್ಳುಗಾರರಾಗಿದ್ದಾರೆ.

يَوْمَ يَبْعَثُهُمُ اللّٰهُ جَمِيْعًا فَيَحْلِفُوْنَ لَهٗ كَمَا يَحْلِفُوْنَ لَكُمْ وَيَحْسَبُوْنَ اَنَّهُمْ عَلٰى شَیْءٍ ۗ اَلَآ اِنَّهُمْ هُمُ الْكٰذِبُوْنَ ﴿١٨﴾

14. ಈ ಎರಡನೆಯ ಆಜ್ಞೆ ಪೂರ್ವೋಕ್ತ ಆಜ್ಞೆಯ ಅನತಿ ಕಾಲದ ನಂತರ ಅವತೀರ್ಣಗೊಂಡಿತು. ಆ ಮೂಲಕ ಕಡ್ಡಾಯ ದಾನವನ್ನು ರದ್ದುಪಡಿಸಲಾಯಿತು. ದಾನಕೊಡುವ ಆಜ್ಞೆ ಎಷ್ಟು ಅವಧಿಯ ವರೆಗಿತ್ತು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. 'ಕತಾದಃ'ರ ಪ್ರಕಾರ ಈ ಆಜ್ಞೆ ಒಂದು ದಿನಕ್ಕಿಂತಲೂ ಕಡಿಮೆ ಅವಧಿ ಬಾಕಿಯುಳಿದಿತ್ತು. ಮುಕಾತಿಲ್ ಬಿನ್ ಹಯ್ಯಾನ್‌ರ ಪ್ರಕಾರ ಹತ್ತು ದಿನವಿತ್ತು. ಇದು, ಉಲ್ಲೇಖಿಸಲ್ಪಟ್ಟ ವರದಿಗಳ ಪೈಕಿ ಈ ಆಜ್ಞೆ ಜಾರಿಯಲ್ಲಿದ್ದ ಕುರಿತು ಇರುವ ಅತ್ಯಂತ ಗರಿಷ್ಠ ಅವಧಿಯಾಗಿದೆ.

19. ಶೈತಾನನು ಅವರನ್ನು ಆಕ್ರಮಿಸಿಕೊಂಡಿದ್ದಾನೆ ಮತ್ತು ಅವನು ಅಲ್ಲಾಹನ ಸ್ಮರಣೆಯನ್ನು ಅವರ ಮನದಿಂದ ಮರೆಸಿಬಿಟ್ಟಿದ್ದಾನೆ. ಅವರು ಶೈತಾನನ ಪಕ್ಷದವರು. ಎಚ್ಚರಿಕೆ! ಶೈತಾನನ ಪಕ್ಷದವರೇ ನಷ್ಟಕ್ಕೊಳಗಾಗುವವರು.

اِسْتَحْوَذَ عَلَيْهِمُ الشَّيْطٰنُ فَاَنْسٰىهُمْ
ذِكْرَ اللّٰهِ ؕ اُولٰٓئِكَ حِزْبُ الشَّيْطٰنِ ؕ اَلَاۤ
اِنَّ حِزْبَ الشَّيْطٰنِ هُمُ الْخٰسِرُوْنَ ﴿۱۹﴾

20. ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ವಿರೋಧಿಸುವವರು ಖಂಡಿತವಾಗಿಯೂ ಅತ್ಯಂತ ನಿಕೃಷ್ಟ ಜೀವಿಗಳಾಗಿದ್ದಾರೆ.

اِنَّ الَّذِيْنَ يُحَآدُّوْنَ اللّٰهَ وَرَسُوْلَهٗۤ
اُولٰٓئِكَ فِى الْاَذَلِّيْنَ ﴿۲۰﴾

21. ನಾನು ಮತ್ತು ನನ್ನ ಸಂದೇಶವಾಹಕರೇ ವಿಜಯಿಗಳಾಗುವೆವೆಂದು ಅಲ್ಲಾಹನು ವಿಧಿ ಬರೆದು ಬಿಟ್ಟಿರುವನು. ವಾಸ್ತವದಲ್ಲಿ ಅಲ್ಲಾಹನು ಅತ್ಯಂತ ಬಲಿಷ್ಠನೂ ಅಜೇಯನೂ ಆಗಿರುತ್ತಾನೆ.

كَتَبَ اللّٰهُ لَاَغْلِبَنَّ اَنَا وَرُسُلِىْ ؕ اِنَّ اللّٰهَ
قَوِىٌّ عَزِيْزٌ ﴿۲۱﴾

22. ಅಲ್ಲಾಹ್ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸುವವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ವಿರೋಧಿಸಿದವರನ್ನು ಪ್ರೀತಿಸುವುದನ್ನು ನೀವೆಂದೂ ಕಾಣಲಾರಿರಿ - ಅಂಥವರು, ಅವರ ತಂದೆ, ಪುತ್ರರು, ಸಹೋದರರು ಮತ್ತು ಆಪ್ತಬಂಧುಗಳೇ ಆಗಿದ್ದರೂ ಸರಿಯೇ. ಅವರ ಹೃದಯಗಳಲ್ಲಿ ಅಲ್ಲಾಹನು ಸತ್ಯ ವಿಶ್ವಾಸವನ್ನು ಅಚ್ಚೊತ್ತಿ ಬಿಟ್ಟಿರುತ್ತಾನೆ. ಮಾತ್ರವಲ್ಲದೆ, ತನ್ನ ಕಡೆಯಿಂದ ಒಂದು ಆತ್ಮವನ್ನು ಪ್ರದಾನ ಮಾಡಿ ಅವರಿಗೆ ಶಕ್ತಿಯನ್ನೊದಗಿಸಿದ್ದಾನೆ. ಅವನು ಅವರನ್ನು, ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಗೊಳಿಸುವನು. ಅವುಗಳಲ್ಲಿ ಅವರು ಸದಾಕಾಲ ವಾಸಿಸುವರು. ಅಲ್ಲಾಹನು ಅವರಿಂದ ಪ್ರಸನ್ನನಾದನು ಮತ್ತು ಅವರು ಅಲ್ಲಾಹನಿಂದ ಪ್ರಸನ್ನರಾದರು. ಅವರು ಅಲ್ಲಾಹನ ಪಕ್ಷದವರು. ತಿಳಿಯಿರಿ, ಅಲ್ಲಾಹನ ಪಕ್ಷದವರೇ ವಿಜಯಿಗಳಾಗುವರು.

لَا تَجِدُ قَوْمًا يُّؤْمِنُوْنَ بِاللّٰهِ وَالْيَوْمِ
الْاٰخِرِ يُوَآدُّوْنَ مَنْ حَآدَّ اللّٰهَ وَرَسُوْلَهٗ
وَلَوْ كَانُوْۤا اٰبَآءَهُمْ اَوْ اَبْنَآءَهُمْ اَوْ
اِخْوَانَهُمْ اَوْ عَشِيْرَتَهُمْ ؕ اُولٰٓئِكَ كَتَبَ
فِىْ قُلُوْبِهِمُ الْاِيْمَانَ وَاَيَّدَهُمْ
بِرُوْحٍ مِّنْهُ ؕ وَيُدْخِلُهُمْ جَنّٰتٍ تَجْرِىْ
مِنْ تَحْتِهَا الْاَنْهٰرُ خٰلِدِيْنَ فِيْهَا ؕ
رَضِىَ اللّٰهُ عَنْهُمْ وَرَضُوْا عَنْهُ ؕ اُولٰٓئِكَ حِزْبُ
اللّٰهِ ؕ اَلَاۤ اِنَّ حِزْبَ اللّٰهِ هُمُ الْمُفْلِحُوْنَ ﴿۲۲﴾